ಮೈಸೂರಿನಲ್ಲಿಯೇ ಉಳಿದುಕೊಂಡಿದ್ದರು. ಹಸ್ತಪ್ರತಿ ಇನ್ನೂ ಸಿದ್ಧವಾಗಿಲ್ಲ.

ಆದರೇನು? ತರಾಸು ತರಾಸು ಅಲ್ಲವೇ? ಬರವಣಿಗೆಯಲ್ಲಿ ದೈತ್ಯ. ಒಂದೊಂದು ಹಾಳೆ ಬರೆದೇ ಎಂಟುಪುಟ ಆಗುತ್ತದಲ್ಲ. ಅದನ್ನು ಮಧ್ಯೆ ಹರಿದರೆ ಇಬ್ಬರು ಕಂಪಾಸಿಟರಿಗೆ ಕೈತುಂಬಾ ಕೆಲಸ. ಆದರೆ ಎಚ್ಚರಿಕೆಯಿಂದ ಬ್ಲೇಡಿನಿಂದ ಆ ಹಾಳೆಯನ್ನು ಮೆಲ್ಲಗೆ ಹರಿಯಬೇಕು ಅಷ್ಟೇ.

ನಾನು ಸೈಕಲ್ ತುಳಿದು, ಅವರ ಮನೆಗೆ ಹೋಗಿ, ಒಂದು ಎರಡು ಹಾಳೆಗಳನ್ನು ತರುವುದು, ಇಲ್ಲಿ ಕಂಪೋಸ್ ಆಗುವುದು ಹೀಗೆಯೇ ಅದರ ಮುದ್ರಣ ಕೆಲಸ ಮುಗಿಯಿತು. ಅದು ಪಠ್ಯವೂ ಆಗಿಹೋಯಿತು.

ತರಾಸು ಅವರದು ಅತ್ಯಂತ ಆತ್ಮೀಯವಾದ ನಡವಳಿಕೆ. ಟಾಂಗಾದಿಂದ ಇಳಿದವರೇ 'ಏನು ಶೇಷನಾರಾಯಣ? ಏನಾಯಿತು?' ಎನ್ನುತ್ತ ಸಿಗರೇಟ್ ಎಳೆಯುತ್ತಿದ್ದಂತೆಯೇ ಎಡದ ಕೈಯನ್ನು ನನ್ನ ಭುಜದ ಮೇಲೆ ಹಾಕಿ ಬಳಸಿಕೊಳ್ಳುವಿಕೆ.

'ಇಷ್ಟು ಫಾರ್ಮು ಆಗಿದೆ ಸಾರ್. ಇನ್ನೊಂದು ಫಾರ್ಮು ಸಿದ್ಧವಾಗಿದೆ. ನೀವೊಂದು ಸಲ ನೋಡ್ತಿರೇನು?' ಎಂದರೆ, 'ಬೇಡ, ಬೇಡ. ನಾನು ನೋಡೋಲ್ಲ. ನೀವು ನೋಡಿ ಮಾಡಿಬಿಡಿಯಪ್ಪ' ಎಂದು ಬಿಡುತ್ತ ಇದ್ದರು.

ಬರೆಯುವುದು ಬೇರೆ. ಪ್ರೂಫ್ ನೋಡುವುದು ಬೇರೆ. ಒಂದೊಂದು ಅಕ್ಷರದ ಮೇಲೂ ಕಣ್ಣಲ್ಲಿ ಕಣ್ಣಿಟ್ಟು ಯಾರು ಈ ಹಾಳು ಕೆಲಸ ಮಾಡುತ್ತಾರೆ?

'ಹಾಳು ಕೆಲಸ' ನಾನು ಹೇಳುವುದು ಅಲ್ಲ. ತರಾಸು ಹೇಳುತ್ತಿದ್ದುದೇ ಹಾಗೆ; ಅವರದೇ ಮಾತು.

(ಏಪ್ರಿಲ್, 1998)



# ತ್ರಿವೇಣಿ

ಹೆಣ್ಣಿಗೆ ಮಾತು ಜಾಸ್ತಿ ಎಂದು ಹೇಳುತ್ತಾರೆ ಅಲ್ಲವೆ? ಹಾಗಿಲ್ಲ ಎಂದು ಯಾರಾದರೂ ಹೇಳಿದರೆ, ಅಂಥವರಿಗೆ ಹೆಣ್ಣಿನ ಪರಿಚಯವೇ ಇಲ್ಲ ಎಂದು ಧಾರಾಳವಾಗಿ ಹೇಳಿಬಿಡಬಹುದು!

ಮಹಿಳೆಯರಿಗೆ ಮಾತು ಜಾಸ್ತಿ ಎಂದ ಮೇಲೆ, ಕಾದಂಬರಿಗಾರ್ತಿಯರು?

ಕೆಲವರನ್ನು ಬಿಡಿ: ಅಪರೂಪ. ಹೆಚ್ಚಿನ ಕಾದಂಬರಿಗಾರ್ತಿಯರಲ್ಲಿ, ಒಬ್ಬರ ಮುಂದೆ ನೀವು ನಿಂತರೆ ಸಾಕು. ಅಬ್ಬಬ್ಬಾ, ನಿಮ್ಮ ಕಿವಿ ಕೊರೆದುಬಿಡುತ್ತಾರೆ; ತೂತು ತೂತು ಮಾಡಿಬಿಡುತ್ತಾರೆ. ನಿಶ್ಚಿತವಾಗಿಯೂ; ಸತ್ಯವಾಗಿಯೂ.

'ನಾಳ್ಕೇ ದಿನಗಳಲ್ಲಿ ನನ್ನ ಕಾದಂಬರಿಯನ್ನು ಬರೆದು ಮುಗಿಸಿಬಿಟ್ಟೆ, ಸಾರ್... ಓದುಗರು ಹೀಗೆ ಬರೆದಿದ್ದಾರೆ... ನೀವು ಬರೆಯದಿದ್ದರೆ ಜಗತ್ತೇ ಮುಳುಗಿ ಹೋಗುತ್ತದೆ ಎಂದಿದ್ದಾರೆ. ಪ್ರಕಾಶಕರು ಮುಗಿಬಿದ್ದಿದ್ದಾರೆ... ಪತ್ರಿಕೆಯವರು ಕಾಗದದ ಮೇಲೆ ಕಾಗದ, ಟೆಲಿಗ್ರಾಂ ಮೇಲೆ ಟೆಲಿಗ್ರಾಂ ಮಾಡುತ್ತಿದ್ದಾರೆ...'